## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿಂದಗಿ

**ಸಿ.ಸಿ.ನಂ.82/2021**

**ಫಿರ್ಯಾದಿದಾರ ಃ** ಸರ್ಕಾರದ ಪರವಾಗಿ
ದೇವರ ಹಿಪ್ಪರಗಿ ಪೋಲೀಸ್‌ರು

**ವಿರುದ್ಧ**

**ಆರೋಪಿತರು ಃ**

1. ಲಗಮಣ್ಣ ತಂದೆ ಗುರಪ್ಪ ಸೋಲ್ಲಾಪೂರ
2. ಮಹಿಪತಿ @ ಮೋನಪ್ಪ ತಂದೆ ಲಗಮಣ್ಣ ಸೋಲ್ಲಾಪೂರ
3. ಶರಣಪ್ಪ ತಂದೆ ಬೀರಪ್ಪ ಸೋಲ್ಲಾಪೂರ
4. ಧರ್ಮವ್ವ ಗಂಡ ಲಗಮಣ್ಣ ಸೋಲ್ಲಾಪೂರ
5. ಮಾದೇವಿ @ ಕಾಳವ್ವ ಗಂಡ ಸಿದ್ದಪ್ಪ ಮಾಕೊಂಡ @ ಮಾಗೊಂಡ
6. ಸಿದ್ದಪ್ಪ ತಂದೆ ಮಡಿವಾಳಪ್ಪ ಮಾಕೊಂಡ @ ಮಾಗೊಂಡ
ಸಾಃ ಎಲ್ಲರೂ ದೇವರ ಹಿಪ್ಪರಗಿ

- - -

## ದೋಷಾರೋಪಣೆ

ಶ್ರೀ.ಮಹಾಂತೇಶ ಭೂಸಗೋಳ., ಬಿ.ಎ. (ಲಾ) ಎಲ್ ಎಲ್ ಬಿ., **ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿಂದಗಿ** ಆದ ನಾನು, ಈ ಮೂಲಕ

1. ಲಗಮಣ್ಣ ತಂದೆ ಗುರಪ್ಪ ಸೋಲ್ಲಾಪೂರ
2. ಮಹಿಪತಿ @ ಮೋನಪ್ಪ ತಂದೆ ಲಗಮಣ್ಣ ಸೋಲ್ಲಾಪೂರ
3. ಶರಣಪ್ಪ ತಂದೆ ಬೀರಪ್ಪ ಸೋಲ್ಲಾಪೂರ
4. ಧರ್ಮವ್ವ ಗಂಡ ಲಗಮಣ್ಣ ಸೋಲ್ಲಾಪೂರ
5. ಮಾದೇವಿ @ ಕಾಳವ್ವ ಗಂಡ ಸಿದ್ದಪ್ಪ ಮಾಕೊಂಡ @ ಮಾಗೊಂಡ
6. ಸಿದ್ದಪ್ಪ ತಂದೆ ಮಡಿವಾಳಪ್ಪ ಮಾಕೊಂಡ @ ಮಾಗೊಂಡ
ಸಾಃ ಎಲ್ಲರೂ ದೇವರ ಹಿಪ್ಪರಗಿ

- - - -

**ಆರೋಪಿತನಾದ ನಿನ್ನ ಮೇಲೆ ಹೊರಿಸಲಾದ ದೋಷಾರೋಪಣೆ ಏನೆಂದರೆ ಃ**

ದಿನಾಂಕ 28-11-2020 ರಂದು 22.30 ಗಂಟೆ 2 ನೇ ಆರೋಪಿತನ ಹೆಂಡತಿ ಭೋಗಾವತಿ ಇವಳನ್ನು ಸುಮಾರು ಒಂದು ತಿಂಗಳಿನಿಂದ ಪಿರ್ಯಾದಿಯು ಆಗಾಗ ತಮ್ಮ ಮನೆಯ ಮುಂದೆ ನಿಂತಿರುವಾಗ ಭೋಗಾವತಿಯು ಮನೆಯಿಂದ ಹೊರಗೆ ಬಂದು ಪಿರ್ಯಾದಿಗೆ ನೋಡುವದು, ನಗುವದು ಮಾಡುತ್ತಿದ್ದುದ್ದನ್ನು ನೋಡಿ ಆರೋಪಿತರು ಪಿರ್ಯಾದಿದಾರನ ಬಗ್ಗೆ ತಪ್ಪು ತಿಳಿದುಕೊಂಡು ಅವನ ಮೇಲೆ ಸಿಟ್ಟಾಗಿ ಆರೋಪಿತರೆಲ್ಲರೂ ಕೂಡಿ ಅಕ್ರಮಕೂಟ ರಚಿಸಿಕೊಂಡು ನಿಮ್ಮ ಸಮಾನ ಉದ್ದೇಶ ಈಡೇರಿಸುವ ಸಲುವಾಗಿ ಅಕ್ರಮಕೂಟದ ಸದಸ್ಯರಾಗಿದ್ದರಿಂದ ಆ ಮೂಲಕ ಭಾ.ದಂ.ಸಂ.ಕಲಂ.143 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮಕೂಟ ರಚಿಸಿಕೊಂಡು ನಿಮ್ಮ ಸಮಾನ ಉದ್ದೇಶ ಈಡೇರಿಸುವ ಸಲುವಾಗಿ ಗುಂಪು ಕೂಡಿಕೊಂಡು ಪಿರ್ಯಾದಿಯ ಜೊತೆ ಗಲಾಟೆ ಮಾಡಿ ದೊಂಬಿ ಉಂಟುಪಡಿಸಿದ್ದರಿಂದ ಆ ಮೂಲಕ ನೀವು ಭಾ.ದಂ.ಸಂ.ಕಲಂ.147 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನಿವು ಅಕ್ರಮಕೂಟ ರಚಿಸಿಕೊಂಡು ನಿಮ್ಮ ಸಮಾನ ಉದ್ದೇಶ ಈಡೇರಿಸುವ ಸಲುವಾಗಿ 6 ನೇ ಆರೋಪಿ ಅಕ್ರಮ ಆಯುಧಗಳಾದ ಸೈಕಲ್ ಚೈನ ಮತ್ತು ಬಡಿಗೆಯನ್ನು ಹಿಡಿದುಕೊಂಡು ದೊಂಬಿ ಉಂಟುಪಡಿಸಿದ್ದರಿಂದ ಆ ಮೂಲಕ ನೀನು ಭಾ.ದಂ.ಸಂ.ಕಲಂ.148 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನಿವು ಅಕ್ರಮಕೂಟ ರಚಿಸಿಕೊಂಡು ನಿಮ್ಮ ಸಮಾನ ಉದ್ದೇಶ ಈಡೇರಿಸುವ ಆರೋಪಿತರೆಲ್ಲರೂ ಕೂಡಿ ಪಿರ್ಯಾದಿಯ ಮನೆಯಗೆ ಅತೀಕ್ರಮಣ ಪ್ರವೇಶ ಮಾಡಿದ್ದರಿಂದ ಆ ಮೂಲಕ ನೀವು ಭಾ.ದಂ.ಸಂ.ಕಲಂ.448 ಸಹ ಕಲಂ 34 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

ಐದನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಅಕ್ರಮಕೂಟ ರಚಿಸಿಕೊಂಡು ನಿಮ್ಮ ಸಮಾನ ಉದ್ದೇಶ ಈಡೇರಿಸುವ ಸಲುವಾಗಿ ನಿಮ್ಮ ಪೈಕಿ 4 ಮತ್ತು 5 ನೇ ಆರೋಪಿತರು ಸ್ವ ಇಚ್ಚೆಯಿಂದ ಚಾ ಸಾ 4 ರವರಿಗೆ ಕೈಯಿಂದ ಹೊಡೆದು ನೆಲಕ್ಕೆ ಕೆಡವಿ ಮೈಕೈಗೆ ಒದ್ದಿದ್ದು ಸಾದಾ ದುಃಖಾಪತಪಡಿಸಿದ್ದು ಸಾದಾ ಸ್ವರೂಪದ ಗಾಯಪಡಿಸಿದ್ದರಿಂದ ಆ ಮೂಲಕ ನೀವು ಭಾ.ದಂ.ಸಂ.ಕಲಂ.323 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

ಆರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ಅಕ್ರಮಕೂಟ ರಚಿಸಿಕೊಂಡು ನಿಮ್ಮ ಸಮಾನ ಉದ್ದೇಶ ಈಡೇರಿಸುವ ಸಲುವಾಗಿ ನಿಮ್ಮ ಪೈಕಿ 2 ನೇ ಆರೋಪಿ ಚಾ ಸಾ 1 ರವರಿಗೆ ಅಕ್ರಮ ಆಯುಧಗಳಾದ ಸೈಕಲ್ ಚೈನದಿಂದ ಸ್ವ ಇಚ್ಚೆಯಿಂದ ಬೆನ್ನಿಗೆ ಹೊಡೆದು ಅಲ್ಲದೇ 6 ನೇ ಆರೋಪಿ ಅಕ್ರಮ ಆಯುಧವಾದ ಬಡಿಗೆಯಿಂದ ಸ್ವ ಇಚ್ಚೆಯಿಂದ ಚಾ ಸಾ 1 ರವರ ಮೈಕೈಗೆ ಹೊಡೆದು ಸಾದಾ ಸ್ವರೂಪದ ದುಃಖಾಪತಪಡಿಸಿದ್ದಲ್ಲದೆ ಆ ಮೂಲಕ ನೀವು ಭಾ.ದಂ.ಸಂ.ಕಲಂ.324 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

ಏಳನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ಅಕ್ರಮಕೂಟ ರಚಿಸಿಕೊಂಡು ನಿಮ್ಮ ಸಮಾನ ಉದ್ದೇಶ ಈಡೇರಿಸುವ ಸಲುವಾಗಿ ನಿಮ್ಮ ಪೈಕಿ 4 ಮತ್ತು 5 ನೇ ಆರೋಪಿತರು ಚಾ ಸಾ 4 ರವರಿಗೆ ಹೊಡೆದು ನೆಲಕ್ಕೆ ಕೆಡವಿ ಮೈಕೆ ಒದ್ದು ಅವಳಿಗೆ ಅವಮಾನಪಡಿಸಿ ಮಾನಭಂಗ ಉಂಟುಪಡಿಸಿದ್ದರಿಂದ ಆ ಮೂಲಕ ನೀವು ಭಾ.ದಂ.ಸಂ.ಕಲಂ.354 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

ಎಂಟನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ಅಕ್ರಮಕೂಟ ರಚಿಸಿಕೊಂಡು ನಿಮ್ಮ ಸಮಾನ ಉದ್ದೇಶ ಈಡೇರಿಸುವ ಸಲುವಾಗಿ ನಿಮ್ಮ ಪೈಕಿ 1 ಮತ್ತು 2 ನೇ ಆರೋಪಿ ಪಿರ್ಯಾದಿಯ ಮೋಟಾರ್ ಸೈಕಲ್ ಸಂಖ್ಯೆ ಕೆಎ/28/ಇಎಸ್-7885 ನೇದ್ದಕ್ಕೆ ಕಲ್ಲನ್ನು ಎತ್ತಿ ಹಾಕಿ ಅಂದಾಜು ರೂಪಾಯಿ 8000/- ಗಳನ್ನು ಕಿಮ್ಮತ್ತಿನ ಬಿಡಿ ಭಾಗಗಳನ್ನು ನಾಶಪಡಿಸಿ ನಷ್ಟ ಉಂಟುಪಡಿದ್ದರಿಂದ ಆ ಮೂಲಕ ನೀನು ಭಾ.ದಂ.ಸಂ.ಕಲಂ.427 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

ಒಂಬತ್ತನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ಅಕ್ರಮಕೂಟ ರಚಿಸಿಕೊಂಡು ನಿಮ್ಮ ಸಮಾನ ಉದ್ದೇಶ ಈಡೇರಿಸುವ ಸಲುವಾಗಿ ಆರೋಪಿತರೆಲ್ಲರೂ ಪಿರ್ಯಾದಿಗೆ ಆ ಸೂಳೆ ಮಗ ಎಲ್ಲಿ ಅದಾ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಶಾಂತಿ ಭಂಗಪಡಿಸಿ ಅಪರಾಧಿಕ ಪ್ರಚೋದನೆ ಉಂಟುಪಡಿಸಿದ್ದರಿಂದ ಭಾ.ದಂ.ಸಂ.ಕಲಂ.504 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ಏಕೊದ್ದೇಶ ಈಡೆರಿಸುವ ಸಲುವಾಗಿ ಆರೋಪಿತರೆಲ್ಲರೂ ಸೇರಿ ಪಿರ್ಯಾದಿಗೆ ಇನ್ನೊಮ್ಮೆ ನಮ್ಮ ಕೈಗೆ ಸಿಕ್ಕರೇ ನಿನ್ನ ಜೀವಸಹಿತ ಬಿಡುವದಿಲ್ಲಾ ಅಂತಾ ಜೀವದ ಬೆದರಿಕೆ ಹಾಕಿ ಅಪರಾಧಿ ಭಯೋತ್ಪಾನದೆ ಉಂಟುಪಡಿಸಿದ್ದರಿಂದ ಭಾ.ದಂ.ಸಂ.ಕಲಂ.506 ಸಹ ಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಆರೋಪ ಎಸಗಿರುವಿರಿ.

ಆದ್ದರಿಂದ ಮೇಲಿನ ಆಪಾದನೆಗಳ ವಿಚಾರಣೆಯು ಈ ನ್ಯಾಯಾಲಯದಿಂದ ನಡೆಯತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ :10-02-2023

ಸಿವಿಲ್ ಜಡ್ಜ ಮತ್ತು ಜೆಎಂಎಫ್‌ಸಿ ನ್ಯಾಯಾಲಯ

ಸಿಂದಗಿ

**ಆಪಾದಿತರ ಹೇಳಿಕೆ**

ಪ್ರಶ್ನೆ 1 ಮೇಲಿನ ಆಪಾದನೆಯ ವಿವರವನ್ನು ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ್ದು ತಿಳಿಯಿತೆ?

ಉತ್ತರಃ

1

2

3

4

5

6

ಪ್ರಶ್ನೆ 2 ಸದರಿ ಮೇಲಿನ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಗಾಗಿ ಕ್ಲೇಮು ಮಾಡುವಿರೆ?

ಉತ್ತರ ಃ

1

2

3

4

5

6

(ಈ ಮೇಲಿನ ಆರೋಪವನ್ನು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ, ಕೇಳಿ ಉತ್ತರ ಪಡೆದು ಸರಿ ವ ನಿಜ ಎಂದು ಪ್ರಮಾಣೀಕರಿಸುವೆನು).

ಸ್ಥಳಃ ಸಿಂದಗಿ,
ದಿನಾಂಕಃ10-02-2023 ಜೆ. ಎಮ್. ಎಫ್.ಸಿ., ಸಿಂದಗಿ

ಆಪಾದಿತರ ಸಹಿ